ಶ್ರೀ ಕೆ. ಪ್ರಭಾಕರ್ (ವರ್ತೂರು).—ಹೌಸ್ ನರ್ಜನ್ಸ್‌ಗಳಿಗೆ ಮತ್ತು ಡಾಕ್ಟರುಗಳಿಗೆ ಮನೆಗಳನ್ನು ಒದಗಿಸಿಕೊಡುವ ವಿಚಾರದಲ್ಲಿ ಹಣ ಒದಗಿದಾಗ ಕೊಡುತ್ತೇವೆಂದು ಉತ್ತರ ಕೊಟ್ಟಿದ್ದೀರಿ. ಮನೆಗಳನ್ನು ಒದಗಿಸುವುದನ್ನು ಒಂದು ಸೀರಿಯಸ್ ಪ್ರಾಬ್ಲಂ ಎಂದು ತಿಳಿದು ಯಾವ ರೀತಿ ಒಂದು ಪ್ಲಾನ್ ಬೇಸಿಸ್‌ಮೇಲೆ ಉಪಾಧ್ಯಾಯರಿಗೆ ಕ್ವಾರ್ಟರ್ಸ್‌ನ್ನು ಕೊಟ್ಟಿರುವ ಹಾಗೆ ಡಾಕ್ಟರುಗಳಿಗೂ ಮತ್ತು ಹೌಸ್ ನರ್ಜನ್‌ಗಳಿಗೂ ಮನೆಗಳನ್ನು ಒದಗಿಸುವಹಾಗೆ ಸರ್ಕಾರದವರು ಏರ್ಪಾಡು ಮಾಡುತ್ತಾರೆಯೇ?

ಶ್ರೀ ವೈ. ರಾಮಕೃಷ್ಣ.—ಈಗಾಗಲೇ ಸರ್ಕಾರದವರು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇನ್ನು ಳಿದಿರುವ ಕಡೆಗಳಲ್ಲಿ ಮುಂದೆ ಈ ಯೋಜನೆಯನ್ನು ಹಾಕಿಕೊಳ್ಳುತ್ತಿದ್ದಾರೆ.

ಶ್ರೀ ಎಚ್. ಪುಟ್ಟದಾಸ (ನಾತನೂರು).—ಮೈಸೂರು ಕೆ. ಆರ್. ಅನ್ಯತ್ರೆಯಲ್ಲಿ ಔಷಧಿಗಳನ್ನು ಕೊಡುವುದರಲ್ಲಿ ಮತ್ತು ಇಂಜಕ್ಷನ್ನುಗಳನ್ನು ಕೊಡುವುದರಲ್ಲಿ ಮೇಲಿನವರು ರಿಲೈಯ ಬಲ್ ಆಗಿ ಇಲ್ಲದೇ ಇರುವುದು ಸರ್ಕಾರಕ್ಕೆ ಗೊತ್ತಿದೆಯೇ? ಇದರಿಂದ ಜನಗಳಿಗೆ ತೊಂದರೆಯಾಗುವುದಿಲ್ಲವೆ?

ಶ್ರೀ ವೈ. ರಾಮಕೃಷ್ಣ.—ಅಂತಹ ವರದಿ ಸರ್ಕಾರಕ್ಕೆ ಬಂದಿಲ್ಲ. ಬಂದರೆ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಪಿ. ಗಂಗಾಧರ್.—ಒಂದು ಕಡೆ ಹೌಸ್ ಸರ್ಜನ್ಸ್ ಸ್ಟ್ರೈಕ್ ಮಾಡುತ್ತೇವೆಂದು ಹಟ ಹಿಡಿದಿದ್ದಾರೆ. ಅವರಿಂದ ರೋಗಿಗಳಿಗೆ ಏನು ಸಾಕಾರ್ಯ ದೊರಕುತ್ತಿತ್ತೋ ಅದು ದೊರಕುತ್ತಾ ಇಲ್ಲ. ನೀವು ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲವೆಂದು ಹೇಳುತ್ತೀರಿ. ಈ ರೀತಿ ಜಗಳ ಮಾಡಿಕೊಂಡು, ನಿಮ್ಮ ಕಡೆಯೂ ಹಟ, ಅವರ ಕಡೆಯೂ ಹಟ ಮಾಡಿ ಹೀಗೆಯೇ ಇದನ್ನು ಮುಂದು ವರಿಸಿಕೊಂಡು ಹೋಗಬೇಕೆಂದು ಸರ್ಕಾರದ ಅಭಿಪ್ರಾಯವೋ ಅಥವಾ ನನ್ನ ಸ್ನೇಹಿತರಾದ ಮಾನ್ಯ ಶ್ರೀ ನಾಗಪ್ಪನವರು ಹೇಳಿದ ಹಾಗೆ ಇತ್ಯರ್ಥ ಮಾಡುತ್ತೀರೋ?

ಶ್ರೀ ವೈ. ರಾಮಕೃಷ್ಣ.—ಈಗಾಗಲೇ ಹೇಳಿದಹಾಗೆ ತುಕೋಳ್ ಕಮಿಷನ್ನಿನವರು ಆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಅವರು ಅವರಿಗೆ 150 ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಅವರಿಗೆ 100 ರೂಪಾಯಿಗಳಿಂದ 150 ರೂಪಾಯಿಗಳವರೆಗೆ ಮಾಡಿದ್ದು ಕಳೆದ ಸೆಪ್ಟೆಂಬರ್‌ನಲ್ಲಿ. ಪುನಃ ಜಾಸ್ತಿ ಮಾಡಬೇಕೆಂದು ಹೇಳಿದರೆ, I don't think there is any justification.

Tenth Report of the Committee on Private Members' Bills and Resolutions

Presentation.

Sri D. MANJUNATH (Hiriyur).—I present the Tenth Report of the Committee on Private Members' Bills and Resolutions.

Mr. SPEAKER.—The Report is presented.

Sri K. P. NADGOWDA (Mudhol).—I move:

"That this Assembly agrees with the Tenth Report of the Committee on Private Members' Bills and Resolutions".

Mr. SPEAKER.—The question is:

"That this Assembly agrees with the Tenth Report of the Committee on Private Members' Bills and Resolutions".

The motion was adopted.